ಕೊಪ್ಪಗೆ ಬೇರೆ ಸಮಿತಿಯನ್ನು ಮಾಡಲಾಗಿದೆ. ಶಿವಮೊಗ್ಗ ತೀರ್ಥಹಳ್ಳಿ ತಾಲ್ಲೂಕುಗಳಿಗೆ ಹೊಸದಾಗಿ ಕ್ಷೇತ್ರ ವಿಂಗಡಣೆ ಮಾಡಲು ಪ್ರಕಟಣೆ ಹೊರಡಿಸಿ ಕನಿಷ್ಟ ಮೂವತ್ತು ದಿನಗಳ ಕಾಲಾವಕಾಶ ನೀಡಿ ಮತದಾರರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ ವಿಲೇ ಮಾಡಲು ಸಾಕಷ್ಟು ಕಾಲಾವಕಾಶ ಬೇಕಾಗಿರುವುದರಿಂದ ಚುನಾವಣಾ ವೇಳಾಪಟ್ಟಿಯ ಘೋಷಣೆಯ ನಂತರ ಚುನಾವಣೆಯನ್ನು ನಡೆಸಲು ನಿಯಮಾವಳಿಯ ಪ್ರಕಾರ 45 ದಿವಸಗಳು ಬೇಕಾಗುವುದು. ಆದ್ದರಿಂದ ಈ ಪ್ರಕ್ರಿಯೆಗೆ ಕನಿಷ್ಟ 112 ದಿವಸಗಳ ಅಗತ್ಯವಿದೆಯೆಂದು ಶಿವಮೊಗ್ಗದ ಜಿಲ್ಲಾಧಿಕಾರಿಯವರು ತಿಳಿಸಿರುತ್ತಾರೆ. ರಾಜ್ಯ ಉಚ್ಚ ನ್ಯಾಯಾಲಯಕ್ಕೆ ಸರ್ಕಾರವು ದಿನಾಂಕ : 30-4.98ರಲ್ಲಿ ಚುನಾವಣೆಯನ್ನು ನಡೆಸಲು ಮೇಲಿನ ಹಿನ್ನೆಲೆಯಲ್ಲಿ ಸಾಧ್ಯವಿಲ್ಲದಿರುವುದರಿಂದ ಅವಧಿ ವಿಸ್ತರಣೆಗೆ ಅರ್ಜಿ ಸಲ್ಲಿಸಿದ್ದು ಸಧ್ಯದಲ್ಲಿ ವಿಚಾರಣೆಗೆ ಬರಲಿದೆ. ಈ ಹಿಂದೆ ಅಲ್ಲಿ ನಾಮಿನೇಟೆಡ್ ಬಾಡಿ ಇತ್ತು. ಅದರ ಅವಧಿಯು 1.2.98ಕ್ಕೆ ಮುಗಿದಿದೆ. ಮತ್ತೆ ಚುನಾವಣೆ ಮಾಡಲು ಜಿಲ್ಲಾಧಿಕಾರಿಯವರಿಗೆ ಪತ್ರವನ್ನು ಬರೆದಿದ್ದೇವೆ. ಚುನಾವಣೆ ಮಾಡಲು ಕನಿಷ್ಟ 112 ದಿವಸ ಸಮಯ ಬೇಕಾಗುತ್ತದೆಂದು ಅವರು ತಿಳಿಸಿರುತ್ತಾರೆ. ಇದರ ಬಗ್ಗೆ ಉಚ್ಚನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತೇವೆ. ನ್ಯಾಯಾಲಯಕ್ಕೆ ಈಗ ರಜೆ ಇರುವುದರಿಂದ ವಿಚಾರಣೆಗೆ ತೆಗೆದುಕೊಂಡಿಲ್ಲ. 112 ದಿವಸಗಳಾದ ಮೇಲೆ ತಕ್ಷಣವೆ ಚುನಾವಣೆಯನ್ನು ಮಾಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಹಾಗಾದರೆ ಏಪ್ರಿಲ್30ರೊಳಗೆ ಚುನಾವಣೆಯನ್ನು ಮಾಡುತ್ತೇವೆಂದು ಏಕೆ ಹೇಳಿದಿರಿ? 112 ದಿವಸಗಳ ಸಮಯ ಬೇಕೆಂದು ತಮಗೆ ಮೊದಲೆ ಗೊತ್ತಿರಲಿಲ್ಲವೇ?

ಶ್ರೀ ಹೆಚ್. ನಾಗಪ್ಪ : ಕೋರ್ಟ್ ನವರು 30-4-98ರೊಳಗೆ ಚುನಾವಣೆ ಮಾಡಿ ಎಂದು ಹೇಳಿದ್ದಾರೆ. ಆದರೆ ನಮಗೆ ಚುನಾವಣೆ ಪ್ರಕ್ರಿಯೆ ಮಾಡಲು ಕನಿಷ್ಟ112ದಿವಸಗಳು ಬೇಕಾಗಿರುವುದರಿಂದ ಮತ್ತೆ ಕೋರ್ಟಿನಲ್ಲಿ ಅರ್ಜಿ ಸಲ್ಲಿಸಿರುತ್ತೇವೆ. 112 ದಿವಸಗಳೊಳಗೆ ಖಂಡಿತವಾಗಿ ಚುನಾವಣೆಯನ್ನು ಮಾಡುತ್ತೇವೆ.

## ರಾಜ್ಯದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಉಪಾಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳ ಬಗ್ಗೆ ಆಗಿಂದಾಗ್ಗೆ ಓದುತ್ತಿರುತ್ತೇವೆ. ಅದು ಲಾಕಪ್ ಸಾವು ಇರಬಹುದು, ಹಿಂಸೆ ಇರಬಹುದು, ದಲಿತರ ಮೇಲೆ ಹಲ್ಲೆ ಇರಬಹುದು, ಗಿರಿಜನರ ಮೇಲೆ ಹಲ್ಲೆ ಇರಬಹುದು, ಅದರ ಬಗ್ಗೆ ನಾವು ಇಲ್ಲಿ ಪ್ರಸ್ತಾಪ ಮಾಡುತ್ತೇವೆ, ಪ್ರತಿಭಟಿಸುತ್ತೇವೆ ಅನಂತರ ಮರೆತುಬಿಡುತ್ತೇವೆ. 1994ರಲ್ಲಿ 9 ಲಾಕಪ್ ಸಾವುಗಳಾಯಿತು, 1995ರಲ್ಲಿ 3, 1996ರಲ್ಲಿ 10, 1997ರಲ್ಲಿ 5 ಆಗಿದೆ. ಸಾಮಾನ್ಯವಾಗಿ ಇಂಥ ಪ್ರಕರಣಗಳಲ್ಲಿ ಪೋಲೀಸ್‌ನವರ ಲಾಠಿ ಏಟು, ಹಾವುಕಡಿದು ಸತ್ತರು ಎಂದು, ಆತ್ಮಹತ್ಯೆಯೆಂದು ಮಾಹಿತಿ ಇರುತ್ತದೆ. 1977ರಲ್ಲಿ ನ್ಯಾಷನಲ್ ಪೋಲೀಸ್ ಕಮೀಷನ್ ಪ್ರತಿಯೊಂದು ಜಿಲ್ಲೆಯಲ್ಲಿ ಇಂಥ ಪ್ರಕರಣಗಳು ಆದಾಗ ಡಿಸ್ಟ್ರಿಕ್ಟ್ ಎನ್‌ಕ್ವೈರಿ ಅಥಾರಿಟಿಯನ್ನು ಮಾಡಬೇಕೆಂದು ಆದೇಶವನ್ನು ಹೊರಡಿಸಿತ್ತು. ನಮ್ಮ ರಾಜ್ಯದಲ್ಲಿ ಅದನ್ನು ಮಾಡಲಿಲ್ಲ. 1993ರಲ್ಲಿ ಪ್ರೊಟೆಕ್ಷನ್ ಆಫ್ ಹ್ಯೂಮನ್ ರೈಟ್ ಆಕ್ಟ್ ಜಾರಿಗೆ ಬಂತು.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಶೂನ್ಯ ವೇಳೆಯಲ್ಲಿ ಇಂಥ ಪ್ರಶ್ನೆ ಕೇಳಿದರೆ ಹೇಗೆ? ಅವರೇನು ಹೇಳಿದ್ದಾರೋ ಅದನ್ನೆಲ್ಲಾ ಸಂಪೂರ್ಣವಾಗಿ ಗಮನಿಸಿ ಅದಕ್ಕೆ ಬೇಕಾದ ಎಲ್ಲಾ ಮಾಹಿತಿಯನ್ನು ಒದಗಿಸುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್ : ಪ್ರೊಟೆಕ್ಷನ್ ಆಫ್ ಹ್ಯೂಮನ್ ರೈಟ್ಸ್ ಆಕ್ಟ್‌ನ ಅಡಿಯಲ್ಲಿ ರಾಜ್ಯಗಳಲ್ಲಿ ಸ್ಟೇಟ್ ಹ್ಯೂಮನ್ ರೈಟ್ಸ್ ಕಮೀಷನ್ ಆಗಬೇಕು, ಅದರ ಜೊತೆಗೆ ಪ್ರತಿ ಜಿಲ್ಲೆಗಳಲ್ಲಿ ಮಾನವ ಹಕ್ಕುಗಳ ನ್ಯಾಯಾಲಯವೂ ಆಗಬೇಕೆಂದು ಹೇಳಲಾಗಿದೆ. ಈಗ ನ್ಯಾಷನಲ್ ಹ್ಯೂಮನ್ ರೈಟ್ಸ್ ಕಮೀಷನ್‌ನ ಅಧ್ಯಕ್ಷರಾಗಿ ಕರ್ನಾಟಕದವರೇ ಆದ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯನವರು ಇದ್ದಾರೆ. ರಾಜ್ಯಗಳಲ್ಲಿ ಮಾನವ ಹಕ್ಕುಗಳ ಆಯೋಗ ರಚನೆಯಾಗದಿರುವ ಬಗ್ಗೆ ಅವರು ಆಗಾಗ್ಗೆ ತಮ್ಮ ಖೇದವನ್ನು ವ್ಯಕ್ತಮಾಡಿಕೊಂಡು ಬಂದಿದ್ದಾರೆ. ರಾಜ್ಯದ ಮುಖ್ಯಮಂತ್ರಿಯವರಿಗೆ ಇದರ ಬಗ್ಗೆ ಜನರು ಮನವಿಯನ್ನು ಹಲವಾರು ಸಲ ಸಲ್ಲಿಸಿದ್ದಾರೆ. 9.12.97ರಂದು ಪ್ರಮುಖ ಸುಮಾರು ಮೂರು ಸಾವಿರ ನಾಗರೀಕರು ಸಹಿ ಮಾಡಿರುವ ಮನವಿ ಪತ್ರವನ್ನು ರಾಜ್ಯಪಾಲರಿಗೆ ಸಲ್ಲಿಸಿದ್ದಾರೆ. ಮೆನ್ ವಿಥ್ ಫವರ್, ಮನಿ, ಸ್ಟೇಟಸ್ ಅವರುಗಳು ಯಾರಿಗೆ ಏನೂ ಶಕ್ತಿ ಇರುವುದಿಲ್ಲ ಅವರ ಮೇಲೆ ಸತತವಾಗಿ ಧಾಳಿ ಮಾಡುತ್ತಲೇ ಬಂದಿದ್ದಾರೆ. ಇದು ಮಾನ್ಯ ಮುಖ್ಯಮಂತ್ರಿಯವರಿಗೂ ಗೊತ್ತಿದೆ. ನಮ್ಮ ರಾಜ್ಯದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗದಿರುವುದಕೋಸ್ಕರ, ನ್ಯಾಷನಲ್ ಪೋಲೀಸ್ ಕಮೀಷನ್ ಹೊರಡಿಸಿರುವ ಆದೇಶದನ್ವಯದಲಾದರೋ, ಇಲ್ಲವೇ ಪ್ರೊಟೆಕ್ಷನ್ ಆಫ್ ಹ್ಯೂಮನ್ ರೈಟ್ಸ್‌ನ ಅಡಿಯಲ್ಲಾದರೂ ನಮ್ಮ ರಾಜ್ಯದಲ್ಲಿ ಸ್ಟೇಟ್ಸ್ ಹ್ಯೂಮನ್ ರೈಟ್ಸ್ ಕಮೀಷನ್ ಮಾಡುತ್ತೀರಾ ಮತ್ತು ಜಿಲ್ಲೆಗಳಲ್ಲಿ ಮಾನವ ಹಕ್ಕುಗಳ ನ್ಯಾಯಾಲಯ ಮಾಡುತ್ತೀರಾ?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಯವರು) : ಮಾನ್ಯ ಉಪಾಧ್ಯಕ್ಷರೆ, ನ್ಯಾಷನಲ್ ಹ್ಯೂಮನ್ ರೈಟ್ಸ್ ಕಮೀಷನ್‌ನ ಹಿಂದಿನ ಅಧ್ಯಕ್ಷರು ಇಲ್ಲಿಗೆ ಬಂದಿದ್ದಾಗ, ರಾಜ್ಯದ ಜನರ ಹಿತದೃಷ್ಟಿಯಿಂದ ಇದನ್ನು ಮಾಡುವುದು ಒಳ್ಳೆಯದು, ಬೇರೆ ಕೋರ್ಟ್ ಗಳಿಗೆ ನೇರವಾಗಿ ಹೋಗಲು ಆಗದೆ ಇರುವವರು ಇಲ್ಲಿ ಪ್ರಸ್ತಾಪ ಮಾಡಬಹುದು, ಹ್ಯೂಮನ್ ರೈಟ್ಸ್ ಪ್ರಿಸರ್ವೇಷನ್ ಮಾಡಬಹುದು ಎಂದು ಹೇಳಿದ್ದರು. ಇದನ್ನು ಎಷ್ಟು ರಾಜ್ಯಗಳು ಮಾಡುತ್ತಿವೆ ಎಂದು ನಾನು ಕೇಳಿದೆ. ಯಾವ ರಾಜ್ಯಗಳೂ ಇದನ್ನು ಮಾಡಲು ಒಪ್ಪಿಲ್ಲವೆಂದು ಅವರು ಹೇಳಿದರು. ಈಗಲೂ ಬಹಳಷ್ಟು ರಾಜ್ಯಗಳು ಇದನ್ನು ಮಾಡಲು ಒಪ್ಪಿಲ್ಲವೆಂದರು. ಇದನ್ನು ಮಾಡಿದರೆ ಇದರ ಖರ್ಚುವೆಚ್ಚಗಳೆಲ್ಲವನ್ನು ರಾಜ್ಯ ಸರ್ಕಾರವೇ ಭರಿಸಬೇಕಾಗುತ್ತದೆ, ಇದಕ್ಕಾಗಿ ಅಪೆಲೆಟ್ ಅಥಾರಿಟಿಯೆಂದೇನಿಲ್ಲ, ಇದರ ಬಗ್ಗೆ ಯೋಚನೆ ಮಾಡಿ, ಇದು ಸೂಕ್ಷ್ಮವಾದ ವಿಚಾರವೆಂದು ಸುಪ್ರೀಂ ಕೋರ್ಟಿನ ನಿವೃತ್ತ ನ್ಯಾಯಮೂರ್ತಿಯವರು ಸಲಹೆ ಮಾಡಿದ್ದರಿಂದ ನಾನು ಸುಮ್ಮನಿದ್ದೆ. Not that we have totally given up that idea. But it is still being considered by all the states. ಹ್ಯೂಮನ್ ರೈಟ್ಸ್ ಕಮೀಷನ್‌ನವರು ಏನೇನು ಹೇಳುತ್ತಾರೆ, ಲಾಕಪ್ ಡೆಥ್ ಆದರೆ ಪರವಾಗಿಲ್ಲ, ಅದಕ್ಕಿಂತ ಸೂಕ್ಷ್ಮವಾದ ವಿಷಯಗಳು ಬರುತ್ತದೆ. ಪರಿಸರ ಬರುತ್ತದೆ, ಆದ್ದರಿಂದ ಇದನ್ನು ಪರಿಗಣಿಸೋಣ. Because of the sensitiveness of the subject, we are still in consultation with the concerned.